**ಅಧಿಕ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹಾಸನ**

ಉಪಸ್ಥಿತರು ಶ್ರೀಮತಿ ಶಿರಿನ್ ಜೆ. ಅನ್ಸಾರಿ,

ಬಿಎ.,ಎಲ್‌ಎಲ್‌ಬಿ(ಹಾನರ್ಸ್) ಎಲ್‌ಎಲ್‌ಎಮ್,

ಅ ಧಿಕ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹಾಸನ.

ದಿನಾಂಕ 3ನೇ ಜನವರಿ 2012

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ ಃಃ 358ಃ2006**

**ಪಿರ್ಯಾದುದಾರರು** ಃಃ **ಕರ್ನಾಟಕ ಸರ್ಕಾರಃ ಹಾಸನ ಗ್ರಾಮಾಂತರ ಪೋಲೀಸ್ ಠಾಣೆ**
(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

ಃಃ ವಿರುದ್ಧ ಃಃ

**ಆರೋಪಿತರು** ಃಃ

1. **ರಾಜಾನಾಯ್ಕ ಬಿನ್ ಮೂರ್ತಿ ನಾಯ್ಕ 28 ವರ್ಷ, ಐದಳ್ಳಿ ಕಾವಲು**
2. **ಜಗದೀಶನಾಯ್ಕ ಬಿನ್ ಮೂರ್ತಿನಾಯ್ಕ 20 ವರ್ಷ, ಐದಳ್ಳಿ ಕಾವಲು**
3. **ಕೃಷ್ಣಾನಾಯ್ಕ ಬಿನ್ ಭೀಮಾನಾಯ್ಕ 26 ವರ್ಷ, ನಾಗೇನಹಳ್ಳಿ**
4. **ಭೀಮಾನಾಯ್ಕ ಬಿನ್ ಕೃಷ್ಣಾನಾಯ್ಕ 58 ವರ್ಷ ನಾಗೇನಹಳ್ಳಿ**

(ಪ್ರತಿನಿಧಿಸುವವರು ಶ್ರೀ ಪಿ ಎನ್

ವಕೀಲರು)

| | | |
|---|---|---|
| ಅಪರಾದ ನಡೆದ ದಿನಾಂಕ | :: | 6.5.2006 |
| ಅಪಾಧಿತರ ವಿರುದ್ಧ ಇರುವ ಅಪಾದನೆಗಳು. | :: | ಭಾರತೀಯ ದಂಡ ಸಂಹಿತೆ ಕಲಂ 341 324 ಸಹ ಕಲಂ 34. |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | :: | 23.12.2011 |
| ಅಪಾದಿತರು ಅಪಾದನೆಗೆ ನೀಡಿದ ಉತ್ತರ | :: | ತಪ್ಪು ಮಾಡಿಲ್ಲ. |
| ಅಂತಿಮ ಆದೇಶ | :: | ಬಿಡುಗಡೆಗೊಳಿಸಲಾಗಿದೆ. |
| ಅಂತಿಮ ಆದೇಶದ ದಿನಾಂಕ | :: | 3.1.2012 |

(ಶಿರಿನ್ ಜೆ.ಅನ್ಸಾರಿ),
ಅಧಿಕ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಮ್‌ಎಫ್‌ಸಿ, ಹಾಸನ.

## ತೀರ್ಪು

ಹಾಸನ ನಗರ ಗ್ರಾಮಾಂತರ ಪೋಲೀಸ್ ಠಾಣಾ ಉಪ ನಿರೀಕ್ಷಕರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 341, 324 ಸಹ ಕಲಂ 34 ರ ರೀತ್ಯಾ ಅಪರಾಧವೆಸಗಿದ್ದಾರೆಂದು ದೋಷಾರೋಪಣೆಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

ದಿನಾಂಕ 6.5.2006 ರಂದು ಸಂಜೆ 8.00 ಗಂಟೆ ಸಮಯದಲ್ಲಿ ನಾಗೇನಹಳ್ಳಿ ಗ್ರಾಮದಲ್ಲಿ ಚಾಸಾ 1 ಕುಮಾರನಾಯ್ಕರವರು ಭೀಮಾನಾಯ್ಕರ ಮನೆಯ ಮುಂಭಾಗದ ಜಲ್ಲಿ ರಸ್ತೆಯಲ್ಲಿ ಮನೆಗೆ ಹೋಗುತ್ತಿರುವಾಗ ಆರೋಪಿತರು ಚಾಸಾ 1 ರವರನ್ನು ಅಕ್ರಮವಾಗಿ ಅಡ್ಡಗಟ್ಟಿ ತಡೆದು ನಿಲ್ಲಿಸಿ 1ನೇ ಆರೋಪಿ ಚಾಸಾ 1 ರವರ ತಲೆಗೆ ಮಚ್ಚಿನಿಂದ ಹೊಡೆದು ರಕ್ತಗಾಯಪಡಿಸಿ, 2ನೇ ಆರೋಪಿ ಚಾಸಾ 1 ರವರ ಬಲಗೈನ ಮಧ್ಯದ ಬೆರಳಿಗೆ ಬ್ಲೇಡಿನಿಂದ ಕುಯ್ದು ರಕ್ತಗಾಯಪಡಿಸಿ, 3ನೇ ಆರೋಪಿ ಬ್ಲೇಡಿನಿಂದ ಚಾಸಾ 1 ರವರ ಎಡರಟ್ಟೆಗೆ ಹೊಡೆದು, 4 ನೇ ಆರೋಪಿ ದೊಣ್ಣೆಯಿಂದ ಚಾಸಾ 1 ರವರ ಬಲ ಭುಜ, ಬೆನ್ನು, ಬಲಕಾಲು ಮತ್ತು ಎಡ ಮಂಡಿಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿಸಿದ್ದಾರೆಂದು ತನಿಖೆಯಿಂದ ಸಾಬೀತಾಗಿರುವುದಾಗಿ ತನಿಖಾಧಿಕಾರಿಗಳು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 341, 324 ಸಹ ಕಲಂ 34 ರ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿಗಳು ತಮ್ಮ ವಕೀಲರ ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿ ಸಲ್ಲಿಸಿ ಈ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಭಾರತೀಯ ದಂಡ ಸಂಹಿತೆ ಕಲಂ. 341, 324 ಸಹ ಕಲಂ 34 ರ ರೀತ್ಯಾ ಅಪರಾಧಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡಿದೆ. ದಂ.ಪ್ರ.ಸಂ.ಕಲಂ 207 ರಂತೆ ಆರೋಪಿಗಳಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ. ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂ 341, 324 ಸಹ ಕಲಂ 34 ರ

ಅಪರಾಧಗಳಿಗೆ ಆಪಾದನೆಯನ್ನು ರಚಿಸಿ ಓದಿ ವಿವರಿಸಿ ಹೇಳಿದ್ದು ಆರೋಪಿತರು ತಾವು ತಪ್ಪು ಮಾಡಿರುವುದಿಲ್ಲ, ವಿಚಾರಣೆ ಆಗಬೇಕು ಎಂದು ಉತ್ತರಿಸಿರುತ್ತಾರೆ.

5. ಅಭಿಯೋಜನ ಪಕ್ಷದವರು ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಪಿರ್ಯಾದುದಾರರಾದ ಚಾ ಸಾ 1 ರವರನ್ನು ಪ್ರಾ ಸಾ 1 ಎಂದು ವಿಚಾರಣೆಗೊಳಪಡಿಸಿ, ಪ್ರಾ ಸಾ 1 ರವರ ಹೇಳಿಕೆಯನ್ನು ನಿ ಪಿ 1 ಮತ್ತು ಸದರಿ ಹೇಳಿಕೆಯಲ್ಲಿರುವ ಅವರ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಿಕೊಂಡಿದ್ದಾರೆ. ಪ್ರಾ ಸಾ 1 ರವರು ಆರೋಪಿತರ ವಿರುದ್ಧ ಇರುವ ಆರೋಪಗಳನ್ನು ರುಜುವಾತುಪಡಿಸುವ ಬಗ್ಗೆ ಯಾವುದೇ ನುಡಿ ಸಾಕ್ಷವನ್ನು ನುಡಿಯದೇ ಇದ್ದ ಕಾರಣ ಉಳಿದ ಸಾಕ್ಷಿದಾರರ ನುಡಿ ಸಾಕ್ಷದ ಅವಶ್ಯಕತೆ ಇರುವುದಿಲ್ಲ. ಆರೋಪಿತರ ವಿರುದ್ಧ ಆರೋಪಗಳನ್ನು ರುಜುವಾತುಪಡಿಸುವ ಸಾಕ್ಷಾಧಾರ ಇಲ್ಲದೇ ಇರುವ ಕಾರಣ ಆರೋಪಿತರ ಹೇಳಿಕೆಯನ್ನು ಭಾ.ದಂ.ಪ್ರ.ಸ. ಕಲಂ 313 ರಡಿಯಲ್ಲಿ ದಾಖಲು ಮಾಡುವ ಅವಶ್ಯಕತೆ ಇರುವುದಿಲ್ಲ. ಆದ ಕಾರಣ ಈ ಪ್ರಕರಣವನ್ನು ತೀರ್ಪಿಗಾಗಿ ಮುಂದೂಡಲಾಗಿದೆ.

6. ಉಭಯ ಪಕ್ಷಕಾರರ ಪರ ವಾದವನ್ನು ಆಲಿಸಲಾಯಿತು.

7. ಅಭಿಯೋಜನ ಪಕ್ಷದವರು ಆರೋಪಿತರ ವಿರುದ್ಧ ಮಾಡಿರುವ ಅಪಾದಾನೆಗಳ ರೀತ್ಯಾ ನನ್ನ ತೀರ್ಮಾನಕ್ಕೆ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

**ಅಂಶ.1. ಃ ಆರೋಪಿತರು ದಿನಾಂಕ 6.5.2006 ರಂದು ಸಂಜೆ 8.00 ಗಂಟೆ ಸಮಯದಲ್ಲಿ ಸಾಚಾ 1 ರವರು ಭೀಮಾನಾಯ್ಕರ ಮನೆಯ ಮುಂಭಾಗದ ಜಲ್ಲಿ ರಸ್ತೆಯಲ್ಲಿ ಹೋಗುತ್ತಿರುವಾಗ ಆರೋಪಿತರು ಸಮಾನ ಉದ್ದೇಶದಿಂದ ಸಾಚಾ 1ರವರನ್ನು ಅಕ್ರಮವಾಗಿ ಅಡ್ಡಗಟ್ಟಿ ತಡೆದು ನಿಲ್ಲಿಸಿದ್ದು ಆ ಮೂಲಕ**

**ಭಾ.ದಂ.ಸ. ಕಲಂ 341 ಸಹ ಕಲಂ 34 ರಂತೆ ಅರೋಪಿತರು ಅಪರಾಧವೆಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂದೇಹವಾಗಿ ರುಜುವಾತು ಪಡಿಸುವರೇ?**

**ಅಂಶ.2. ಃ ಆರೋಪಿತರು ಮೇಲೆ ಹೇಳಿದ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ನೇ ಆರೋಪಿ ಸಾಚಾ 1 ರವರ ತಲೆಗೆ ವ್ಮಚ್ಚಿನಿಂದ ಹೊಡೆದು ರಕ್ತಗಾಯಪಡಿಸಿ, 2ನೇ ಆರೋಪಿ ಸಾಚಾ 1 ರವರಿಗೆ ಬಲಗೈನ ಮಧ್ಯದ ಬೆರಳಿಗೆ ಬ್ಲೇಡಿನಿಂದ ಕುಯ್ದು ರಕ್ತಗಾಯಪಡಿಸಿ, 3ನೇ ಆರೋಪಿ ಸಾಚಾ 1 ರವರ ಎಡರಟ್ಟೆಗೆ ಹೊಡೆದು, 4ನೇ ಆರೋಪಿ ದೊಣ್ಣೆಯಿಂದ ಸಾಚಾ 1 ರವರ ಬಲ ಭುಜ, ಬೆನ್ನು ಬಲಕಾಲು ಮತ್ತು ಎಡ ಮಂಡಿಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯ ಪಡಿಸಿದ್ದು ಆ ಮೂಲಕ ಭಾ.ದಂ.ಸ. ಕಲಂ 324 ಸಹ ಕಲಂ 34 ರಂತೆ ಅರೋಪಿತರು ಅಪರಾಧವೆಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂದೇಹವಾಗಿ ರುಜುವಾತು ಪಡಿಸುವರೇ?**

**ಅಂಶ.3. ಃ ಏನು ಆದೇಶ?**

8. ನನ್ನ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ.1 ಃ ನಕರಾತ್ಮಕವಾಗಿ**

**ಅಂಶ.2 ಃ ನಕರಾತ್ಮಕವಾಗಿ**

**ಅಂಶ.3 ಃ ಅಂತಿಮ ಅದೇಶದಂತೆ ಈ ಕೆಳಕಂಡ,**

**ಕಾರಣಗಳು**

9. **ಅಂಶ 1 ಃ**ಈ ಪ್ರಕರಣದಲ್ಲಿ ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ನಿಸ್ಸಂದೇಹವಾಗಿ ರುಜುವಾತುಪಡಿಸುವ ಜವಬ್ದಾರಿ ಅಭಿಯೋಜನಾ ಪಕ್ಷದವರ ಮೇಲೆ ಇದೆ. ಅದಕ್ಕಾಗಿ ಅಭಿಯೋಜನ ಪಕ್ಷದವರು ಘಟಣೆಯ ಪತ್ಯಕ್ಷ ಸಾಕ್ಷಿ ಹಾಗೂ ಪಿರ್ಯಾದುದಾರರಾದ ಚಾ ಸಾ 1 ರವರನ್ನು ಪ್ರಾಸಾ 1 ಎಂದು ವಿಚಾರಣೆಗೆ ಒಳಪಡಿಸಿ, ಪ್ರಾ ಸಾ 1 ರವರ ಹೇಳಿಕೆಯನ್ನು ನಿ ಪಿ 1 ಎಂದು ಗುರುತಿಸಿಕೊಂಡಿದ್ದಾರೆ. ಈ ಪ್ರಕರಣದ ಪಿರ್ಯಾದುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಆರೋಪಿಗಳು ಗೊತ್ತು, ಆರೋಪಿಗಳು ತಮ್ಮನ್ನು ಅಡ್ಡಹಾಕಿ ಮಚ್ಚು ದೊಣ್ಣೆ ಮತ್ತು ಬ್ಲೇಡಿನಿಂದ ಹಲ್ಲೆ ಮಾಡಿಲ್ಲ ಎಂದು ನುಡಿದಿರುತ್ತಾರೆ. ತಾನು ಆ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲವೆಂದು ಕೂಡ ನುಡಿದಿರುತ್ತಾರೆ. ಪ್ರಾ ಸಾ 1 ರವರು ಘಟಣೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಮುಂದೆ ಪೂರಕವಾಗಿ ಸಾಕ್ಷಿ ನುಡಿಯದೇ ಇದ್ದ ಕಾರಣ ಪ್ರಾ ಸಾ 1 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿದ್ದು ಅಭಿಯೋಜನಾ ಪಕ್ಷದವರು ಪ್ರಾ ಸಾ 1 ರವರ ಪಾಟೀ ಸವಾಲಿನಲ್ಲಿ ಆರೋಪಿತರ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸುವಲ್ಲಿ ವಿಫಲರಾಗಿದ್ದಾರೆ. ಆರೋಪಿಗಳು ದಿನಾಂಕ 6.5.2006 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಹಳೇ ದ್ವೇಷದಿಂದ ಪ್ರಾಸಾ 1 ರವರ ಮೇಲೆ ಗಲಾಟೆ ಮಾಡಿ ಮಚ್ಚು, ದೊಣ್ಣೆ ಮತ್ತು ಬ್ಲೇಡಿನಿಂದ ಹಲ್ಲೆ ಮಾಡಿ ರಕ್ತಗಾಯ ಉಂಟು ಮಾಡಿರುವುದನ್ನು ಇವರು ನಿರಾಕರಿಸಿರುತ್ತಾರೆ. ಪ್ರಾ ಸಾ 1 ರವರು ಘಟಣೆ ಬಗ್ಗೆ ಪೋಲೀಸರಿಗೆ ನಿ ಪಿ 1 ರಂತೆ ತಮ್ಮ ಹೇಳಿಕೆಯನ್ನು ಕೊಟ್ಟಿಲ್ಲವೆಂದು ನುಡಿದಿರುತ್ತಾರೆ.

10. ಸ್ವತಃ ಪಿರ್ಯಾದುದಾರರೇ ಆರೋಪಿಗಳು ತನ್ನ ಮೇಲೆ ಯಾವುದೇ ಕೃತ್ಯ ಎಸಗಿಲ್ಲ, ಎಂದು ಸಾಕ್ಷಿ ನುಡಿದಿದ್ದು, ಆದ್ದರಿಂದ ಹೆಚ್ಚಿನ ವಿಚಾರಣೆಗಾಗಿ ಉಳಿದ ಸಾಕ್ಷಿದಾರರನ್ನು ಸಾಕ್ಷಿ ನುಡಿಯಲು ನ್ಯಾಯಾಲಯದ ಮುಂದೆ ಬರಮಾಡಿಕೊಳ್ಳುವ ಅಭಿಯೋಜನಪರ

ಪ್ರಾರ್ಥನೆಯನ್ನು ಈ ನ್ಯಾಯಾಲಯ ತಿರಸ್ಕರಿಸಿರುತ್ತದೆ. ಹಾಗೆ ಕರೆಸಿಕೊಂಡರೂ ಕೂಡ ಆರೋಪಿತರ ವಿರುದ್ಧ ಆರೋಪಗಳನ್ನು ರುಜುವಾತುಪಡಿಸುವ ಯಾವುದೇ ಉದ್ದೇಶ ಈಡೇರುವುದಿಲ್ಲ. ಆದ್ದರಿಂದ ಇತರೇ ಸಾಕ್ಷಿದಾರರ ನುಡಿ ಸಾಕ್ಷದ ಅವಶ್ಯಕತೆ ಇರುವುದಿಲ್ಲ. ಘಟಣೆಯ ಪಿರ್ಯಾದುದಾರರೇ ಘಟಣೆಗೆ ಪೂರಕವಾಗಿ ಸಾಕ್ಷವನ್ನು ನುಡಿದಿಲ್ಲ. ಅಭಿಯೋಜನ ಪರವಾಗಿ ಸಾಕ್ಷವನ್ನು ನುಡಿದ ಸಾಕ್ಷಿದಾರನ ಸಾಕ್ಷದಿಂದ ದಿನಾಂಕ 6.5.2006 ರಂದು ಸಂಜೆ 8.00 ಗಂಟೆ ಸಮಯದಲ್ಲಿ ಆರೋಪಿತರು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಚಾ ಸಾ 1 ರವರೊಂದಿಗೆ ಜಗಳ ತೆಗೆದು ಮಚ್ಚು, ದೊಣ್ಣೆ ಮತ್ತು ಬ್ಲೇಡಿನಿಂದ ಹಲ್ಲೆ ಮಾಡಿ ರಕ್ತಗಾಯವನ್ನು ಉಂಟು ಮಾಡಿರುತ್ತಾರೆಂದು ರುಜುವಾತುಪಡಿಸಲು ಅಭಿಯೋಜನಾ ಪಕ್ಷದವರು ವಿಫಲರಾಗಿದ್ದಾರೆ. ಆದ್ದರಿಂದ ಅಂಶ 1 ಮತ್ತು 2ನ್ನು ನಕರಾತ್ಮಕವಾಗಿ ಉತ್ತರಿಸಿರುತ್ತೇನೆ.

11. **ಅಂಶ 3 ::** ಮೇಲ್ಕಂಡ ಅಂಶಗಳ ಚರ್ಚೆಯ ಅಧಾರದ ಮೇಲೆ ಕೆಳಕಂಡ ಆದೇಶವನ್ನು ಮಾಡಿರುತ್ತೇನೆ.

## ಆದೇಶ

**ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರ ರೀತ್ಯಾ ಆರೋಪಿತರ ವಿರುದ್ಧ ಮಾಡಲಾದ ಭಾರತೀಯ ದಂಡ ಸಂಹಿತೆ ಕಲಂ. 341 ಮತ್ತು 324 ಸಹ ಕಲಂ 34 ರ ಆರೋಪಗಳಿಂದ ಆರೋಪಿತರನ್ನು ದೋಷಮುಕ್ತರನ್ನಾಗಿ ಪರಿಗಣಿಸಿ ಬಿಡುಗಡೆಗೊಳಿಸಲಾಗಿದೆ.**

**ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಯನ್ನು ರದ್ದು ಗೊಳಿಸಲಾಗಿದೆ.**

**ಸ್ವತ್ತು ಪಟ್ಟಿ ಸಂಖ್ಯೆ 75/06 ದಿನಾಂಕ 7.5.2006 ರಲ್ಲಿ ಅಮಾನತ್ತುಪಡಿಸಿಕೊಂಡ ಸ್ವತ್ತು ಸಂಖ್ಯೆ 1 ಮಚ್ಚನ್ನು ಮೇಲ್ಮನವಿಯ ಅವಧಿ ಮುಗಿದ ನಂತರ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಲೂ ಮತ್ತು ಸ್ವತ್ತು ಸಂಖ್ಯೆ 2 ಮತ್ತು 3ನ್ನು ಮೇಲ್ಮನವಿಯ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.**

(ನನ್ನ ಉಕ್ತಲೇಖನಕದ ಪ್ರಕಾರ ಶೀಘ್ರಲಿಪಿಗಾರರು ಗಣಕೀಕರಣ ಮಾಡಿ ನಂತರ ಅದನ್ನು ಪರಿಷ್ಕರಿಸಿ, ತಿದ್ದುಪಡಿ ಮಾಡಿ ಈ ದಿವಸ ಅಂದರೆ ದಿನಾಂಕ 3ನೇ ಜನವರಿ, 2012 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

(ಶಿರಿನ್ ಜೆ. ಅನ್ಸಾರಿ)
ಅಧಿಕ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಮ್‌ಎಫ್‌ಸಿ, ಹಾಸನ.

## ಅನುಬಂಧ

**ಅಭಿಯೋಜನಾ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ ::**

ಪ್ರಾ ಸಾ 1 :: ಕುಮಾರನಾಯ್ಕ

**<u>ಅಭಿಯೋಜನಾ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ ::</u>**

ನಿ ಪಿ 1 :: ಪಿರ್ಯಾದು

**<u>ಆರೋಪಿತನ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ ::</u>**

ಇಲ್ಲಾ

**<u>ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ</u>**

ಇಲ್ಲಾ

**<u>ಸ್ವತ್ತುಗಳ ಪಟ್ಟಿ ::</u>**

1. ಒಂದು ಮಚ್ಚು
2. ಒಂದು ದೊಣ್ಣೆ
3. 2 ಬ್ಲೇಡುಗಳು

ಅಧಿಕ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಮ್ಎಫ್‌ಸಿ, ಹಾಸನ.